At K.R. Sagar

1. Hotel Mayura Cauvery
2. Boating facilities

1. Public Convenience near parking place

At Kere Thonnur

1. Wayside Amenities

At Hemagiri

1. Public Convenience

ECO TOURIST FACILITIES

1. At Bheemeshwari
2. At Doddamakali

At Adichunchanagiri

1. Yatrika

At Kokkare Bellur

1. Public Convenience

ಇ) ಬಸರಾಳು, ಹೊಸಬೂದನೂರು, ಕಿಕ್ಕೇರಿ ಮತ್ತು ಗಾಣದಾಳು.

Basaralu, Hosabudanur, Kikkeri and Ganadalu.

ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋ ಜನರೇಷನ್ ಘಟಕ ಸ್ಥಾಪನೆ.

2195(2794) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋ ಜನರೇಷನ್ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಈ ಘಟಕದ ವಿವರಗಳೇನು;

ಇ) ರಾಜ್ಯದಲ್ಲಿನ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಕೋ-ಜನರೇಷನ್ ಘಟಕ ಸ್ಥಾಪಿಸಲು ಯೋಜನೆಯನ್ನು ಕೈಗೊಳ್ಳಲಾಗುವುದೆ?

ಶ್ರೀ ಎಂ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಹೌದು

ಆ) ಮಂಡ್ಯದ ಮೈಸೂರು ಸಕ್ಕರೆ ಕಂಪನಿಯ ಆವರಣದಲ್ಲಿ ಕೋಜನರೇಷನ್ ಘಟಕವನ್ನು ಸುಮಾರು ರೂ. 76 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಕೋ ಜನರೇಷನ್ನಿನ ಉತ್ಪಾದನಾ ಸಾಮರ್ಥ್ಯವು 28 ಮೆ. ವ್ಯಾಟ್ ಆಗಿರುತ್ತದೆ. ಈ ಉತ್ಪಾದನೆಯಲ್ಲಿ 9ಮೆ. ವ್ಯಾಟ್ ವಿದ್ಯುತ್ತನ್ನು ಕಂಪನಿಯ ಆಂತರಿಕ ಬಳಕೆಗೆ ಪೂರೈಸಿಕೊಂಡು, ಮಿಕ್ಕುಳಿದ 19.22 ಮೆ. ವ್ಯಾಟ್ ವಿದ್ಯುತ್ತನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ನೀಡಲಾಗುವುದು. ಸಕ್ಕರೆ ಘಟಕದಲ್ಲಿ ದೊರೆಯುವ ಕಬ್ಬಿನ ಸಿಪ್ಪೆ ಹಾಗೂ ಸಂಸ್ಕರಣ ಘಟಕದಲ್ಲಿ ದೊರಕುವ ಬಯೊಗ್ಯಾಸ್‌ನ್ನು ಉರುವಲಾಗಿ ಕೋ ಜನರೇಷನ್ ಘಟಕಕ್ಕೆ ಉಪಯೋಗಿಸಲಾಗುವುದು.

ಈ ಯೋಜನೆಗೆ ಕರ್ನಾಟಕ ಸರ್ಕಾರವು ಹೆಚ್ಚುವರಿಯಾಗಿ ರೂ. 5.00 ಕೋಟಿ ಈಕ್ವಿಟಿ ಬಂಡವಾಳ ಹೂಡಲು ಒಪ್ಪಿಗೆ ನೀಡಿದೆ.

ಒಟ್ಟು ಈ ಯೋಜನಾ ವೆಚ್ಚ ರೂ. 7600ಲಕ್ಷಗಳು. ಇದರಲ್ಲಿ ಅವಧಿ ಸಾಲವಾಗಿ ಹುಡ್ಕೊ ಸಂಸ್ಥೆಯು ರೂ. 5726 ಲಕ್ಷವನ್ನು ಮಂಜೂರು ಮಾಡಿರುತ್ತದೆ ಹಾಗೂ ಈ ಅವಧಿ ಸಾಲಕ್ಕೆ ಸರ್ಕಾರವು ಖಾತರಿಯನ್ನು ನೀಡಿದೆ.

ಈ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ರೂ. 1500 ಲಕ್ಷದಷ್ಟು ಮೊತ್ತಕ್ಕೆ ಡಿಬೆಂಚರ್ ಬಾಂಡ್ ರೂಪದಲ್ಲಿ ಸಾಲ ಪಡೆಯಲು ಸರ್ಕಾರದ ಖಾತರಿ ನೀಡಲಾಗುವುದು.

ಇ) ರಾಜ್ಯದಲ್ಲಿ ಈಗ ಹಾಲಿ 34 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ ಈಗಾಗಲೇ ಈ ಕೆಳಕಂಡ 6 ಸಕ್ಕರೆ ಕಾರ್ಖಾನೆಗಳಲ್ಲಿ ಕೋ-ಜನರೇಷನ್ ಘಟಕ ಸ್ಥಾಪಿಸಿ ವಿದ್ಯುತ್ ಉತ್ಪಾದಿಸಲಾಗುತ್ತಿದೆ.

1)	ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ, ನಂಜನಗೂಡು	16.00	ಮೆ.ವಾ
2)	ಉಗಾರ್ ಸಕ್ಕರೆ ಕಾರ್ಖಾನೆ, ಉಗಾರ್‌ಖುರ್ದ್	20.00	"
3)	ಐ.ಸಿ.ಎಲ್. ಶುಗರ್ಸ್, ಕೆ.ಆರ್. ಪೇಟೆ	12.00	"
4)	ಶಾಮನೂರು ಸಕ್ಕರೆ ಕಾರ್ಖಾನೆ, ದುಗ್ಗಾವತಿ	22.00	"
5)	ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆ, ಸಿದ್ದಾಪುರ	17.2	"
6)	ರೇಣುಕಾ ಶುಗರ್ಸ್, ಮನೋಳಿ	11.2	"

ಈ ಕೆಳಕಂಡ 5 ಸಕ್ಕರೆ ಕಾರ್ಖಾನೆಗಳು ಈಗಾಗಲೇ ಕೋ ಜನರೇಷನ್ ಘಟಕ ಅಳವಡಿಕೆಯ ಕೆಲಸ ಕೈಗೆತ್ತಿಕೊಂಡಿವೆ

1) ಗೋದಾವರಿ ಶುಗರ್ ಮಿಲ್ಸ್, ಸಮೀರವಾಡಿ
2) ಚಾಮುಂಡೇಶ್ವರಿ ಶುಗರ್ಸ್, ಕೆ.ಎಂ. ದೊಡ್ಡಿ
3) ಮೈಸೂರು ಸಕ್ಕರೆ ಕಾರ್ಖಾನೆ, ಮಂಡ್ಯ
4) ದಾವಣಗೆರೆ ಸಕ್ಕರೆ ಕಾರ್ಖಾನೆ, ಕುಕ್ಕವಾಡ
5) ರೈತರ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ರನ್ನನಗರ

ಹಾಲಿ ಕಾರ್ಯ ನಿರ್ವಹಿಸುತ್ತಿರುವ ಬಾಕಿ ಉಳಿದ ಕಾರ್ಖಾನೆಗಳೂ ಸಹ ಲಾಭದಾಯಕವಾಗಿ ನಡೆಯಲು ಕೋ ಜನರೇಷನ್ ಘಟಕ ಅಳವಡಿಸುವುದು ಅನಿವಾರ್ಯವಾಗಿದೆ. ಆದುದರಿಂದ ಹಂತಹಂತವಾಗಿ ಅವುಗಳೂ ಕೂಡ ಈ ಯೋಜನೆಯನ್ನು ಕೈಗೆತ್ತಿಕೊಳ್ಳುವುದರತ್ತ ಯೋಚಿಸುತ್ತಿವೆ.

ಅದೇ ರೀತಿ ಹೊಸದಾಗಿ ಪ್ರಾರಂಭವಾಗಲಿರುವ ಸಹಕಾರಿ ವಲಯದ 10 ಸಕ್ಕರೆ ಕಾರ್ಖಾನೆಗಳಿಗೆ ಕೋ ಜನರೇಷನ್ ಘಟಕ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ. ಖಾಸಗಿ ವಲಯದಲ್ಲಿ ಹೊಸದಾಗಿ ಪ್ರಾರಂಭವಾಗಲಿರುವ ಬಹುತೇಕ ಸಕ್ಕರೆ ಕಾರ್ಖಾನೆಗಳೂ ಕೂಡ ಕೋ ಜನರೇಷನ್ ಅಳವಡಿಸಿಕೊಳ್ಳುತ್ತದೆ.

ಬಸವನ ಬಾಗೇವಾಡಿ ವಿಧಾನ ಸಭಾ ಕ್ಷೇತ್ರದಲ್ಲಿ ಸಿ.ಆರ್.ಎಫ್. ಯೋಜನೆ ರಾಷ್ಟ್ರೀಯ ಹೆದ್ದಾರಿ ಡಾಂಬರೀಕರಣ.

2197(3386) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಿ.ಆರ್.ಎಫ್. ಯೋಜನೆಯಡಿ ಬಸವನಬಾಗೇವಾಡಿ ಮತಕ್ಷೇತ್ರ ವ್ಯಾಪ್ತಿಯ ಶೇಗುಣಶಿ-ಮಮದಾಪೂರ ಮಮದಾಪೂರ-ಕಂಬಾಗಿ, ರೇವರಗೆಣ್ಣೂರು-ಕಂಬಾಗಿ ಹಾಗೂ ಬಾಗೇವಾಡಿ ತಾಲ್ಲೂಕಿನ ಮಸೂತಿ- ಕೂಡಗಿ ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನು ದುರಸ್ತಿಗೊಳಿಸಿ ಡಾಂಬರೀಕರಣ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ ಈ ಡಾಂಬರೀಕರಣ ಯೋಜನೆಗಳ ಕಾಮಗಾರಿಗಳನ್ನು ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ) :—

ಅ) ಅಂದಾಜು ಪತ್ರಿಕೆಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಆ) ಅಂದಾಜು ಪತ್ರಿಕೆಗಳಿಗೆ ಮಂಜೂರಾತಿ ದೊರೆತ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು.